ಒಂದು ದಿನ ಕಲ್ಯಾಣಿಯ ಅಮ್ಮ ಇದ್ದಕ್ಕಿದ್ದಂತೆ ತೌರಿನ ಕಡೆಗೆ ಹೊರಟರು. ತಾನೂ ಬರುತ್ತೇನೆಂದ ಕಲ್ಯಾಣಿಯನ್ನೂ ಕರೆದುಕೊಂಡು ಹೊರಟ ಕಾರು ಅಜ್ಜಿ ಊರಿನ ಬದಲು ಸಮೀಪದ ಚಿಕ್ಕಿಯ ಹಳ್ಳಿಗೆ ಹೋಯಿತು. ಅಲ್ಲಿ ಗಂಡಸರು, ತಲೆ ಮೇಲೆ ಮುಸುಕು ಹಾಕಿದ ಹೆಂಗಸರು ಮೌನವಾಗಿ ಕಲ್ಯಾಣಿಯ ಚಿಕ್ಕಿ ಮನೆ ದಿಕ್ಕಿಗೆ ಹೋಗುತ್ತಿದ್ದಾರೆ. ದುಗುಡದ ಮುಖ ಹೊತ್ತ ಕಲ್ಯಾಣಿಯ ಅಮ್ಮ ಅಲ್ಲೇ ಇದ್ದ, ತಮಗೆ ಬಹಳ ಬೇಕಾದವರ ಮನೆಯಲ್ಲಿ ಕಲ್ಯಾಣಿಯನ್ನು ಬಿಟ್ಟು, ''ನಾನು ಚಿಕ್ಕಿ ಮನೆಗೆ ಹೋಗಿ ಬರುವವರೆಗೆ ಇಲ್ಲಿರು'' ಎಂದು ಹೇಳಿ ಹೋಗಿಬಿಟ್ಟರು. ಮನೆ ಒಡತಿ ಲಕ್ಷ್ಮಕ್ಕ ಕಲ್ಯಾಣಿಯ ಅಮ್ಮನಿಗೆ ಮೊದಲಿನಿಂದ ಪರಿಚಯವಿದ್ದವರು. ಆಕೆಯನ್ನು ಪ್ರೀತಿಯಿಂದ ಮಾತಾಡಿಸಿ, ''ನಿಮ್ಮ ಚಿಕ್ಕಮ್ಮನ ಗಂಡ ಒಗ್ಬುಟ್ರು ಮಗಾ. ಅದಕ್ಕೆ ಅಮ್ಮ ಒಗವ್ರೆ. ನೀನು ಅಲ್ಲಿ ಎದ್ರಕತೀಯಾ ಅಂತ ಇಲ್ಲಿ ಬುಟ್ಟವ್ರೆ. ಬಾವ್ವ ತಿಂಡಿ ಮಾಡಿವ್ನಿ ತಿನ್ನು'' ಎಂದು ಹೇಳಿದರು. ಕಲ್ಯಾಣಿಗೆ ಗಾಬರಿ, ಸಂದರ್ಭದ ಗಂಭೀರತೆಯನ್ನು ಅರಿಯಲಾಗದ ವಯಸ್ಸಿನ ದುಗುಡ ಸೇರಿಕೊಂಡು ತಿಂಡಿ ತಿಂದರೂ ಏನೂ ಮಾತಾಡದೆ ಸುಮ್ಮನೆ ಕುಳಿತುಬಿಟ್ಟಳು. ಎಷ್ಟೋ ಹೊತ್ತಿನ ಮೇಲೆ ಅಮ್ಮ ಬರುತ್ತಿದ್ದಂತೆ ಕಲ್ಯಾಣಿ ಸೀದಾ ಊರಿಗೆ ಹೊರಟುಬಿಟ್ಟಳು.

ಬೇಸಿಗೆ ರಜದಲ್ಲಿ ಕಲ್ಯಾಣಿ ಅಜ್ಜಿ ಊರಿಗೆ ಹೋದಾಗ ತಕ್ಷಣ ಚಿಕ್ಕಜ್ಜಿ ಮನೆಗೆ ಹೋದಳು. ಸೌಮ್ಯ ಸ್ವಭಾವದ ಮುಗ್ಧ ಚಿಕ್ಕಿಗೆ ಹೆರಿಗೆ ಆಗಿ ಮುದ್ದಾದ ಹೆಣ್ಣು ಮಗು ತೊಟ್ಟಿಲಲ್ಲಿ ಮಲಗಿತ್ತು. ನೋಡಲು ಚಿಕ್ಕಪ್ಪನೇ ಇಲ್ವಲ್ಲಾ, ಯಾರಿಗೂ ಬಾರದ ಹೊಟ್ಟೆನೋವು ಚಿಕ್ಕಪ್ಪನಿಗೆ ಬಂದಿತ್ತಂತೆ. ಮೈಸೂರಿನಲ್ಲಿ ಇದ್ದಬದ್ದ ಒಳ್ಳೆ ಡಾಕ್ಟರುಗಳೆಲ್ಲಾ ತಪಾಸಣೆ ಮಾಡಿದರೂ ಚಿಕ್ಕಪ್ಪ ಉಳಿಯಲಿಲ್ಲ. ಎಳೆ ವಯಸ್ಸಿನ ಚಿಕ್ಕಿ ಹಳ್ಳಿಯವರ ಬಾಯಲ್ಲಿ ಗಂಡ ಸತ್ತ ಮುಂಡೆಯಾದಳು. ಗಂಡ ಹೋದ ಮೇಲೆ ಅವಳ ಹಣೆ ಬರಿದಾಯ್ತು. ಮಲ್ಲಿಗೆ ಮುಡಿಯುವ ಭಾಗ್ಯವಿಲ್ಲದೆ ಜಡೆ ಎಣೆಗಂಟಾಗಿ ಹೆಕ್ಕತ್ತಿನ ಮೇಲೆ ಕುಳಿತು, ಕೈಗಳಲ್ಲಿ ಗಾಜಿನ ಬಳೆ ಹೋಗಿ ಚಿನ್ನದ ಬಳೆಗಳು ಉಳಿದುಕೊಂಡವು.

ಪ್ರತಿ ರಜದಲ್ಲಿ ಕಲ್ಯಾಣಿ ಅಜ್ಜಿಯ ಹಳ್ಳಿಗೆ ಹೋಗದೆ ಬಿಡುತ್ತಿರಲಿಲ್ಲ. ಅಲ್ಲಿನ ಕೆರೆ, ಕಾಲುವೆ, ದೇವಸ್ಥಾನ ಮನೆ ಬಾಗಿಲಿಗೆ ಕಾಣುವ ಹೊಲಗುಡ್ಡಗಳು, ಕರುಗಳು ಅವಳನ್ನು ಕರೆಯುತ್ತಲೇ ಇದ್ದವು. ಚಿಕ್ಕಿಗೆ ಗಂಡನ ಮನೆಯವರು ತಾತ್ಸಾರ ಮಾಡಲಿಲ್ಲ. ಗಂಡನ ಪಾಲಿನ ಹೊಲ, ಗದ್ದೆಗಳನ್ನು ಅವಳಿಗೆ ಕೊಟ್ಟರು. ತನ್ನ ಮಗುವಿನ ಭವಿಷ್ಯಕ್ಕಾಗಿ ಚಿಕ್ಕಿ ಎಲ್ಲವನ್ನು ನಮ್ರಳಾಗಿ ಸ್ವೀಕರಿಸಿದಳು. ಆದರೆ, ಅದ್ಯಾಕೊ ಅವಳಿಗೆ ಗಂಡನಿಲ್ಲದೆ ಮನೆಯಲ್ಲಿ ಇರಲಾಗಲಿಲ್ಲ. ತೌರಿಗೆ ಬಂದುಬಿಟ್ಟ ಅವಳ ಮನಸ್ಸಿಗೆ ನೋವಾಗದಂತೆ ತಾಯಿ, ಅಣ್ಣ, ಅತ್ತಿಗೆ ನಡೆದುಕೊಂಡರು. ಚಿಕ್ಕಿ ದುಃಖಿಸುತ್ತ ಕೂರಲಿಲ್ಲ. ತಾಯಿ ಮನೆಯ ಮತ್ತು ಆರಂಭದ ಕೆಲಸಗಳಲ್ಲಿ ದೊಡ್ಡ ಸಹಾಯವಾದಳು. ಕೆಲಸಗಳಲ್ಲಿ ಮೈಮರೆತಳು. ದಿನಗಳು ಸದ್ದಿಲ್ಲದೆ ಉರುಳತೊಡಗಿದವು.

ಈ ಮಧ್ಯೆ ಕಲ್ಯಾಣಿ ಬೆಳೆಯತೊಡಗಿದಳು. ದೇಹ, ಮನಸ್ಸು ಅರಳತೊಡಗಿದವು. ಅವಳು ಕೊಂಚ ಯೋಚಿಸಬಲ್ಲವಳಾದಂತೆ ಸುತ್ತಮುತ್ತಲ ಕಟು ವಾಸ್ತವ ಅವಳ ಅರಿವಿಗೆ ಬರತೊಡಗಿತು. ಈ ಸಂಧಿಕಾಲದಲ್ಲಿ ಕಲ್ಯಾಣಿ ಚಿಕ್ಕಿಯರ ಭೇಟಿ ಎಂದಿನಂತೆ ಆಯಿತು. ಅದೇನೋ ಈ ಸಲ ಚಿಕ್ಕಿ ಇವತ್ತು ನಮ್ಮ ಮನೆಯಲ್ಲೇ ಮಲಗಿಕೊ ಎಂದದ್ದರಿಂದ ಇಬ್ಬರೂ ರಾತ್ರಿ ಚಿಕ್ಕ ಮಗಳೊಂದಿಗೆ ಮಲಗಿ ಹರಟಿದರು. ಕಲ್ಯಾಣಿಗೆ ಅವಳ ಅರಿವೇ ಇಲ್ಲದೆ ಆವರಿಸಿದ ನಿದ್ದೆಯಿಂದ ಥಟ್ಟನೆ ಮಧ್ಯರಾತ್ರಿ ಎಚ್ಚರವಾದಾಗ ಚಿಕ್ಕಿ ನಿದ್ದೆ ಬಾರದೆ ಹೊರಳಾಡುತ್ತಿದ್ದಳು. ''ಏಕೆ ಇನ್ನೂ ನಿದ್ದೆ ಬರಲಿಲ್ಲವಾ'' ಎಂದು ಕಲ್ಯಾಣಿ ಕೇಳಲಾಗಿ ಚಿಕ್ಕಿ ಹೇಳಿದ್ದು, "ಅಯ್ಯೋ ನನಗೆಲ್ಲಿ ಸಲೀಸಾಗಿ ನಿದ್ದೆ ಬಂದಾತು, ಇದು ನನ್ನ ಕರ್ಮ" ಕಲ್ಯಾಣಿಗೂ ನಿದ್ದೆ ದೂರವಾಯ್ತು. ಕಲ್ಯಾಣಿ ಈಗ ಕೊಂಚ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದ್ದಳು. ಒಮ್ಮೆ ನಮ್ಮಮ್ಮ ಚಿಕ್ಕಜ್ಜಿ ಕೈಲಿ ಚಿಕ್ಕಿಗೆ ಕೈತುಂಬಾ ಕೆಲಸ ಕೊಡಿ. ಅವಳು ಒಂದಲ್ಲ ಒಂದು ಕೆಲಸದಲ್ಲಿ